**ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *07.02.2024* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಸಿ.ಎಂ.ಜೆ ರವರಿಂದಃ**

. ನನಗೆ ಚಾ.ಸಾ–2 ನಂಜುಂಡಸ್ವಾಮಿ ಇವರ ಪರಿಚಯ ಇದೆ. ಅವರು ಪತ್ರಕರ್ತರು ಎಂದರೆ ನಿಜ. ಚಾ.ಸಾ–1 ಮಹದೇವಮೂರ್ತಿ ಅವರು ಸಹ ಮೀಡಿಯಾದಲ್ಲಿ ಕೆಲಸ ಮಾಡುತ್ತಾರೆ. 2009 ರಿಂದ ಅವರು ಮೀಡಿಯಾದಲ್ಲಿ ಕೆಲಸ ಮಾಡುತ್ತಾರೆ. ನಾನು ಸಿರಿ ನ್ಯೂಸ್ ಚಾನೆಲ್ ನ ಮಾಲೀಕನಿದ್ದೇನೆ. ನನ್ನ ಚಾನೆಲ್ 2016 ರಲ್ಲಿ ಪ್ರಾರಂಭವಾಗಿದೆ. ಪೋಲೀಸರ ಮುಂದೆ ದಿಃ***11.06.2015*** ರಂದು ನಾನು ಸಿರಿ ನ್ಯೂಸ್ ಚಾನೆಲ್ ನಲ್ಲಿ ವ್ಯವಸ್ಥಾಪಕನಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ಹೇಳಿಕೆ ಕೊಟ್ಟಿದ್ದೆ ಸಾಕ್ಷಿ ಸ್ವತಃ ಹೇಳುತ್ತಾರೆ 2015 ರಲ್ಲಿಯೇ ನಮ್ಮ ಚಾನೆಲ್ ಪ್ರಾರಂಭವಾಗಿತ್ತು ಆದರೆ 2016 ರಲ್ಲಿ ರಿಲೇ ಪ್ರಾರಂಭವಾಗಿತ್ತು. ನಂಜುಂಡಸ್ವಾಮಿಯವರು ನಮ್ಮ ಚಾನೆಲ್ ನಲ್ಲಿ ಚೀಫ್ ಎಡಿಟರ್ ಆಗಿ ಕೆಲಸ ಮಾಡುತ್ತಾರೆ ಎಂದರೆ ನಿಜ. ಮಹದೇವಮೂರ್ತಿಯವರು ನಮ್ಮ ಚಾನೆಲ್ ನಲ್ಲಿ ಚೀಫ್ ರಿಪೋರ್ಟರ್ ಆಗಿ ಕೆಲಸ ಮಾಡುತ್ತಾರೆ ಎಂದರೆ ನಿಜ. ಚಾ.ಸಾ–5 ಶ್ರೀಕಾಂತ್ ಇವರು ಕೇಬಲ್ ಆಪರೇಟರ್ ಆಗಿ ಕೆಲಸ ಮಾಡತ್ತಾರೆ ಎಂದರೆ ಗೊತ್ತಿಲ್ಲ. 2014–15 ರಿಂದ ನನಗೆ ಶ್ರೀಕಾಂತ್ ಅವರ ಪರಿಚಯವಿದೆ. ಅದಕ್ಕೂ ಮೊದಲು ಸಹ ಶ್ರೀಕಾಂತ್ ಇವರು ಯಾವುದಾದರೂ ಕಾರ್ಯಕ್ರಮದಲ್ಲಿ ನನ್ನನ್ನು ಭೇಟಿ ಮಾಡುತ್ತಿದ್ದರು. ನನಗೆ ಚಾ.ಸಾ–3 ಎಲ್ವಿನ್ ಇವರ ಪರಿಚಯವಿಲ್ಲ. ಚಾ.ಸಾ–4 ನಾರಾಯಣ ಇವರ ಪರಿಚಯವಿಲ್ಲ.

2. ಮಹದೇವಮೂರ್ತಿ ಅವರು 2010 ರಲ್ಲಿ ಹತ್ತನೇ ತರಗತಿವರೆಗೆ ಓದಿದ್ದರು. ಮಹದೇವಮೂರ್ತಿ ಅವರ ಸ್ನೇಹಿತರು ಯಾರು ಯಾರು ರೈಲ್ವೇಯಲ್ಲಿ ಅರ್ಜಿ ಹಾಕಿದ್ದರು ಎಂದು ಗೊತ್ತಿಲ್ಲ. 2010 ರಲ್ಲಿ ಮಹದೇವಮೂರ್ತಿ ಅವರು 10 ಲಕ್ಷ ರೂಪಾಯಿಗಳನ್ನು ಮಂಜುನಾಥ ರೇಣುಕೇಗೌಡ ಇವರಿಗೆ ಕೊಟ್ಟಿದ್ದರು. ಆ ಹಣ ಕೊಟ್ಟಾಗ ನಾನು ಹಾಜರಿರಲಿಲ್ಲ. ಆ ಕಾಲಕ್ಕೆ ಶಿವಲಿಂಗೇಗೌಡ ಹಾಜರಿದ್ದರು. ಆ ಶಿವಲಿಂಗೇಗೌಡ ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್ ನ ವಾಸಿ ಇರುತ್ತಾರೆ. ಮಹದೇವಮೂರ್ತಿ ರೈಲ್ವೇ ಇಲಾಖೆಯಲ್ಲಿ ಯಾವ ಹುದ್ದೆಗೆ ಅರ್ಜಿ ಸಲ್ಲಿಸಿದ್ದರು ಎಂದು ನೆನಪಿಲ್ಲ. ಮಹದೇವಮೂರ್ತಿ ಅವರ ಸ್ನೇಹಿತರು ಯಾವ ಹುದ್ದೆಗೆ ಅರ್ಜಿ ಸಲ್ಲಿಸಿದ್ದರು ಎಂದು ನೆನಪಿಲ್ಲ. ಅವರೆಲ್ಲರೂ ಒಂದೇ ಹುದ್ದೆಗೆ ಅರ್ಜಿ ಸಲ್ಲಿಸಿದ್ದರೋ ಅಥವಾ ಬೇರೆ ಬೇರೆ ಹುದ್ದೇಗೆ ಸಲ್ಲಿಸಿದ್ದರೋ ಗೊತ್ತಿಲ್ಲ. 2010 ರಲ್ಲಿ ಮಹದೇವಮೂರ್ತಿ ಅವರಿಗೆ ಇಂಟರ್ ವ್ಯೂ ಬಂದಿತ್ತು. ಉಳಿದವರಿಗೂ ಸಹ ಅದೇ ವರ್ಷದಲ್ಲಿ ಇಂಟರ್ ವ್ಯೂ ಬಂದಿತ್ತು. ಮಹದೇವಮೂರ್ತಿ ಅವರು 2010 ರ ಆಜುಬಾಜಿನಲ್ಲಿ ಅವರ ವ್ಯವಹಾರಗಳನ್ನು ಅವರೇ ಸ್ವತಂತ್ರವಾಗಿ ನಿಭಾಯಿಸುತ್ತಿದ್ದರು ಎಂದರೆ ನಿಜ. ಮಹದೇವಮೂರ್ತಿ ಅವರ ಇಂಟರ್ ವ್ಯೂ ಯಾವಾಗ ಆಗಿದ್ದು ಎಂದು ಗೊತ್ತಿಲ್ಲ. 2011 ರಲ್ಲಿ ಮಹದೇವಮೂರ್ತಿ ಅವರು ಆ ಕೆಲಸ ಅವರಿಗೆ ಸಿಗಲಿಲ್ಲ ಎಂದು ನನಗೆ ತಿಳಿಸಿದ್ದರು. ಆದರೆ ನಿಖರವಾದ ದಿನಾಂಕ ನೆನಪಿಲ್ಲ. ಮಹದೇವಮೂರ್ತಿ ಅವರು ಮಂಜುನಾಥ ರೇಣುಕೇಗೌಡನಿಗೆ ಹಣವನ್ನು ಬ್ಯಾಂಕ್ ಖಾತೆ ಮೂಲಕ ಪಾವತಿ ಮಾಡಿದ್ದರೋ ಅಥವಾ ನಗದಾಗಿ ಪಾವತಿ ಮಾಡಿದ್ದರೊ ಗೊತ್ತಿಲ್ಲ. ಶಿವಲಿಂಗೇಗೌಡ ಮತ್ತು ಮಹದೇವಮೂರ್ತಿ ಅವರಿಗೆ ಹೇಗೆ ಪರಿಚಯವಾಗಿತ್ತು ಎಂದು ಗೊತ್ತಿಲ್ಲ. ಮಹದೇವಮೂರ್ತಿ ಅವರು ಆ ಹಣವನ್ನು 1 ನೇ ಆರೋಪಿತನಿಗೆ ಎಲ್ಲಿ ಕೊಟ್ಟಿದ್ದರು ಎಂದು ಗೊತ್ತಿಲ್ಲ.

3. 2011 ರಲ್ಲಿ 1 ನೇ ಆರೋಪಿತನಿಗೆ ಬೆಂಗಳೂರಿನ ಹೊಟೆಲ್ ನಲಿ ಹಣ ವಾಪಸ್ಸು ಕೊಡುವಂತೆ ಹೇಳಿದ್ದೆ ಆ ಹೊಟೆಲ್ ಹೆಸರು ಗೊತ್ತಿಲ್ಲ. ಆ ರೀತಿ ಹಣ ವಾಪಸ್ಸು ಕೇಳಿದಾಗ *1* ನೇ ಆರೋಪಿತ*,* ಬಂಡಿ*,* ಗಡ್ಕರಿ ಮತ್ತು ಶಿವಲಿಂಗೇಗೌಡ ಹಾಜರಿದ್ದರು. ಆ ಕಾಲಕ್ಕೆ ಮಹದೇವಮೂರ್ತಿ ಸಹ ಹಾಜರಿದ್ದರು. 1 ನೇ ಆರೋಪಿತ 3 ½ ಲಕ್ಷ ರೂಪಾಯಿಯನ್ನು ನನ್ನ ಖಾತೆಗೆ ವರ್ಗಾವಣೆ ಮಾಡಿದಾಗ ಉಳಿದ ಹಣದ ಕುರಿತು ಯಾವುದೇ ಲಿಖಿತ ದಾಖಲೆ ಮಾಡಿಕೊಂಡಿರಲಿಲ್ಲ. 2011 ರಿಂದ 2015 ರ ಮಧ್ಯದಲ್ಲಿ ಸಹ ನಾನು 1 ನೇ ಆರೋಪಿತನನ್ನು ಭೇಟಿ ಮಾಡಿದ್ದೆ. ಉಳಿದ ಹಣ ಮರುಪಾವತಿ ದಿನಾಂಕ ನಿಗದಿ ಮಾಡಿರಲಿಲ್ಲ. *2015* ರಲ್ಲಿ ನಾನು ಲಕ್ಷ್ಮಿಪುರಂ ಪೋ.ಠಾಣೆಗೆ ಹೋದಾಗ ಒಬ್ಬ ಸಿದ್ದರಾಜು ಎನ್ನುವ ಇನ್ಸ್ ಪೆಕ್ಟರ್ ಇದ್ದರು. ನಾನು ಆ ರೀತಿ ಹೋದಾಗ ಈ ಕೇಸ್ ದಾಖಲಾಗಿತ್ತೊ ಇಲ್ಲವೊ ಗೊತ್ತಿಲ್ಲ. ನನ್ನ ಹೇಳಿಕೆ ಕಾಲಕ್ಕೆ ಆರೋಪಿತ ಪೋ.ಠಾಣೆಯಲ್ಲಿ ಇರಲಿಲ್ಲ. ಆರೋಪಿತನನ್ನು ದಸ್ತಗಿರಿ ಮಾಡಿದಾಗ ನನ್ನನ್ನು ಪುನಃ ಪೋ.ಠಾಣೆಗೆ ಕರೆದಿದ್ದರು. ಅದಕ್ಕೂ ಮೊದಲು ನಾನು ನನ್ನ ಹೇಳಿಕೆಯನ್ನು ಕೊಟ್ಟಿದ್ದೆ. *2010* ರಲ್ಲಿ ಮಹದೇವಮೂರ್ತಿ ಅವರು ರೈಲ್ವೇ ಇಲಾಖೆಯಲ್ಲಿ ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ್ದರು ಮತ್ತು ಆರೋಪಿತನಿಗೆ *10* ಲಕ್ಷ ರೂಪಾಯಿ ಹಣ ಕೊಟ್ಟಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಸುಳ್ಳು ಭರವಸೆ ನೀಡಿ ಹಣ ಪಡೆದು ಕೆಲಸ ಕೊಡಿಸುವುದಾಗಿ ಹೇಳಿ ನಂತರ ಕೊಡಿಸಿರಲಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮಧ್ಯಸ್ಥಿಕೆ ವಹಿಸಿದ್ದಕ್ಕೆ *1* ನೇ ಆರೋಪಿತ ನನ್ನ ಖಾತೆಗೆ *3 ½* ಲಕ್ಷ ಪಾವತಿ ಮಾಡಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. *2015* ರಲ್ಲಿ ನ್ಯಾಯಾಲಯದ ಮುಂದೆ ಇರುವ

ಪಾರ್ಕ್ ನಲ್ಲಿ ಗಲಾಟೆ ಆಗಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಆ ಗಲಾಟೆ ಕಾಲಕ್ಕೆ ನಾನು ಹಾಜರಿರಲಿಲ್ಲ.

4. 1ನೇ ಆರೋಪಿತ ಪರಿಚಯ ನಮಗೆ ಶಿವಲಿಂಗೇಗೌಡರ ಮೂಲಕ ಆಗಿತ್ತು ಎಂದರೆ ನಿಜ. ಆ ಕಾಲಕ್ಕೆ ನಾನು ರಾಜಕೀಯದಲ್ಲಿ ಸೇವೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ 2007 ರಿಂದ 2009 ರಲ್ಲಿ ನಾನು ಟೆಕ್ಸ್ ಟೈಲ್ ಮೆಂಬರ್ ಆಗಿದ್ದೆ. ಶಿವಲಿಂಗೇಗೌಡರು ಸಂಗಪ್ಪ ಬಂಡಿ ಇವರನ್ನು ಬೆಂಗಳೂರಿನಲ್ಲಿ ಪರಿಚಯಸಿದ್ದರು ಎಂದರೆ ನಿಜ. ಆ ಕಾಲಕ್ಕೆ ನಾನು ಮಂಜುನಾಥ ರೇಣುಕೆಗೌಡನಿಗೆ ನಾನು ಟೆಕ್ಸ್ ಟೈಲ್ ಚೇರ್ ಮೆನ್ ಕೆಲಸ ಕೊಡಿಸುವುದಾಗಿ ಹೇಳಿದ್ದೆ ಎಂದರೆ ಸರಿಯಲ್ಲ. ಆ ಕೆಲಸಕ್ಕೆ 35 ಲಕ್ಷ ರೂಪಾಯಿಗಳನ್ನು ಕೊಡಬೇಕು ಎಂದು ನಾನು ಅವರಿಗೆ ಒತ್ತಾಯಿಸಿದ್ದೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ಅವರು ಅನೇಕ ಬಾರಿ ನನಗೆ ಹಣವನ್ನು ನಗದಾಗಿ ಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಿಃ18.06.2011 ರಂದು 1ನೇ ಆರೋಪಿತ ನನ್ನ ಖಾತೆಗೆ 3 ½ ಲಕ್ಷ ಪಾವತಿ ಮಾಡಿದ್ದಾರೆ ಎಂದರೆ ನಿಜ. ಆ 3 ½ ಲಕ್ಷ ಹಣವನ್ನು ಸಹ ನನಗೆ ಅಧ್ಯಕ್ಷ ಕೆಲಸ ಕೊಡಿಸುವ ಸಲುವಾಗಿ ಪಾವತಿ ಮಾಡಿದ್ದರು ಎಂದರೆ ಸರಿಯಲ್ಲ. ನನಗೆ ಎಂ.ಐ.ದೊಡ್ಡಮನಿ, ವಿಠಲ್.ಎಂ.ವಿ.ಸಿ, ಶಿವಪುತ್ರ ಎನ್ನುವವರ ಪರಿಚಯವಿಲ್ಲ. ನಾನು ಅವರೆಲ್ಲರಿಗೂ ರೈಲ್ವೇ ಯಲ್ಲಿ ಕೆಲಸ ಕೊಡಿಸುವುದಾಗಿ ಹೇಳಿದ್ದೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಾನು ಒಪ್ಪಿದ ಪ್ರಕಾರ ಅವರಿಗೆ ಕೆಲಸ ಕೊಡಿಸಿರಲಿಲ್ಲ ಎಂದರೆ ಸರಿಯಲ್ಲ. ನನ್ನ ವಿರುದ್ಧ ಮಂಜುನಾಥ ರೇಣುಕೇಗೌಡ ಇವರು ದಿಃ22.12.2012 ರಂದು ಸವದತ್ತಿ ಪೋ.ಠಾಣೆಯಲ್ಲಿ ದೂರು ಕೊಟ್ಟಿದರು ಎಂದರೆ ನಿಜ. ಆ ಕೇಸಿನಲ್ಲಿ ನನ್ನನ್ನು ದಸ್ತಗಿರಿ ಮಾಡಿದ್ದರು ಮತ್ತು ನಾನು ಜಾಮೀನು ಪಡೆದಿದ್ದರು ಎಂದರೆ ನಿಜ. ಪೋಲೀಸರು ನನ್ನ

ವಿರುದ್ದ ಚಾರ್ಜ್ ಶೀಟ್ ಸಲ್ಲಿಸಿದ್ದರು ಎಂದರೆ ನಿಜ. ಸಾಕ್ಷಿ ಒಪ್ಪಿದ್ದರಿಂದ ಸದರಿ ಪ್ರಕರಣದ ಆರ್ಡರ್ ಶೀಟ್, ಪ್ರ.ವ.ವರದಿ ಮತ್ತು ಮುಂತಾದ ದಾಖಲೆಗಳನ್ನು ಒಟ್ಟಿಗೆ ನಿ.ಡಿ–*1* ಎಂದು ಗುರುತಿಸಿದೆ. ಸಾಕ್ಷಿ ಸ್ವತಃ ಹೇಳುತ್ತಾರೆ ಅದು ಸುಪ್ರೀಂ ಕೊರ್ಟ್ ನಲ್ಲಿ ಕ್ವಾಶ್ ಮಾಡಿದ್ದಾರೆ. ಆ ಕೇಸನ್ನು ರದ್ದುಪಡಿಸಲು ನಾನು ಧಾರಾವಾಡ ಹೈ ಕೋರ್ಟ್ ನಲ್ಲಿ ಅರ್ಜಿ ಹಾಕಿದ್ದೆ ಎಂದರೆ ನಿಜ. ಆ ಕೇಸ್ ವಜಾ ಅಗಿತ್ತು ಎಂದರೆ ಲಿಬರ್ಟಿ ಕೊಟ್ಟು ವಜಾ ಮಾಡಿದ್ದರು ಆದರೆ ಏನು ಲಿಬರ್ಟಿ ಎಂದು ನೆನಪಿಲ್ಲ. ಆ ಆದೇಶದ ವಿರುದ್ದ ನಾನು ಸುಪ್ರೀಂ ಕೊರ್ಟ್ ನಲ್ಲಿ ಕ್ರಿಮಿನಲ್ ಅಫೀಲ್ *1411/2017* ರಂತೆ ಅರ್ಜಿ ಹಾಕಿದ್ದೆ ಎಂದರೆ ನಿಜ. ಆ ಕೇಸ್ ನಲ್ಲಿ ನಾನು ಮಂಜುನಾಥ ರೇಣುಕೇಗೌಡ ಇವರಿಗೆ ಅವರಿಂದ ಪಡೆದ ಹಣವನ್ನು ವಾಪಸ್ಸು ಕೊಡಲು ಒಪ್ಪಿಕೊಂಡಿದ್ದೆ ಎಂದರೆ ನಿಜ. ಆ ಪ್ರಕರಣದಲ್ಲಿ ಒಬ್ಬ ಕೆ.ವಿ.ವಿಶ್ವನಾಥನ್ ಎನ್ನುವ ವಕೀಲರು ನನ್ನ ಪರವಾಗಿ ಹಾಜರಾಗಿದ್ದರು ಎಂದರೆ ನಿಜ. ಆ ಕೇಸ್ ನಲ್ಲಿ ನನ್ನ ವಿರುದ್ದ ಸವದತ್ತಿ ಪೋ.ಠಾಣೆಯ ಕೇಸ್ ಮತ್ತು ಮೈಸೂರಿನ *2* ನೇ ಜೆ.ಎಂ.ಎಫ್.ಸಿ ಕೋರ್ಟ್ ನ ಮಹದೇವಪ್ಪ ಇವರು ಹಾಕಿದ್ದ ಕೇಸ್ ಅನ್ನು ರಾಜೀ ಮಾಡಿಕೊಳ್ಳಲು ಒಪ್ಪಂದವಾಗಿತ್ತು ಎಂದರೆ ನಿಜ.

*5.* ಶಿವಾನಂದ ರಬ್ಬಣ್ಣನವರ್ ಎನ್ನುವವರು ನನ್ನ ವಿರುದ್ದ ಬೆಳಗಾಂ ನ *4* ನೇ ಜೆ.ಎಂ.ಎಫ್.ಸಿ ಕೋರ್ಟ್ ನಲ್ಲಿ ಸಿ.ಸಿ *889/2012* ರಂತೆ ಚೆಕ್ ಬೋನ್ಸ್ ಕೇಸ್ ದಾಖಲಿಸಿದ್ದರು ಎಂದರೆ ನಿಜ. ಸಾಕ್ಷಿ ಒಪ್ಪಿದ್ದರಿಂದ ಸದರಿ ಪ್ರಕರಣದ ಆರ್ಡರ್ ಶೀಟ್, ದೂರು, ಚೆಕ್ ಮತ್ತು ಬ್ಯಾಂಕ್ ಹಿಂಬರಹ ಪ್ರತಿಗಳನ್ನು ಒಟ್ಟಿಗೆ ನಿ.ಡಿ–*2* ಎಂದು ಗುರುತಿಸಿದೆ. ಸಾಕ್ಷಿ ಸ್ವತಃ ಹೇಳುತ್ತಾರೆ ಆ ಪ್ರಕರಣ ಕೂಡ ರದ್ದಾಗಿದೆ. ದುಂಡಪ್ಪ ಗಡ್ಕರಿ ಇವರು ನನ್ನ ವಿರುದ್ದ ಚಿಕ್ಕೋಡಿ ಪೋ.ಠಾಣೆಯಲ್ಲಿ ದಾಖಲಿಸಿದ್ದ ಪ್ರಕರಣದಲ್ಲಿ ನನ್ನ ವಿರುದ್ದ ಆರೋಪಣಾ ಸಲ್ಲಿಸಿದ್ದರು ಎಂದರೆ ನಿಜ. ಸದರಿ ಪ್ರಕರಣದ

ಆರ್ಡರ್ ಶೀಟ್*,* ಚಾರ್ಜ್ ಶೀಟ್*,* ಪ್ರ.ವ.ವರದಿ ಮತ್ತು ಮುಂತಾದ ದಾಖಲೆಗಳ ಪ್ರತಿಗಳನ್ನು ಒಟ್ಟಿಗೆ ನಿ.ಡಿ*-3* ಎಂದು ಗುರುತಿಸಿದೆ. ಸಾಕ್ಷಿ ಸ್ವತಃ ಹೇಳುತ್ತಾರೆ ಆ ಪ್ರಕರಣ ಕೂಡ ರದ್ದಾಗಿದೆ. *2012* ರಲ್ಲಿ ನನ್ನ ವಿರುದ್ಧ ನಾರಾಯಣಸ್ವಾಮಿ ಎನ್ನುವವರು ವರ್ತೂರ್ ಪೋ.ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು ಮತ್ತು ಅದರಲ್ಲೂ ಸಹ ಆರೋಪಣಾ ಸಲ್ಲಿಸಿದ್ದರು ಎಂದರೆ ನಿಜ. ಸದರಿ ಪ್ರಕರಣದ ಆರ್ಡರ್ ಶೀಟ್ ಮತ್ತು ಮುಂತಾದ ದಾಖಲೆಗಳ ಪ್ರತಿಗಳನ್ನು ಒಟ್ಟಿಗೆ ನಿ.ಡಿ*-4* ಎಂದು ಗುರುತಿಸಿದೆ. ಸಾಕ್ಷಿ ಸ್ವತಃ ಹೇಳುತ್ತಾರೆ ಆ ಪ್ರಕರಣ ಕೂಡ ರದ್ದಾಗಿದೆ. ನನ್ನ ವಿರುದ್ಧ ಕುವೆಂಪುನಗರ ಪೋ.ಠಾಣೆಯಲ್ಲಿ ದಿಃ*05.01.2022* ರಂದು ಬಿ.ವಿ.ಮಂಜುನಾಥ್ ಕೊಟ್ಟ ದೂರಿನ ಮೇಲೆ ಮೊ.ಸಂಖ್ಯೆ *2/2022* ರಂತೆ ಪ್ರಕರಣ ದಾಖಲಾಗಿದೆ ಎಂದರೆ ನಿಜ. ಆ ಪ್ರಕರಣದಲ್ಲಿ ಬಿ.ವಿ.ಮಂಜುನಾಥ್ ಇವರು ನನ್ನ ಮೇಲೆ *25* ಕೋಟಿ ರೂಪಾಯಿಗಳನ್ನು ವಂಚಿಸಿದ ಬಗ್ಗೆ ದೂರು ಸಲ್ಲಿಸಿದ್ದಾರೆ ಎಂದರೆ ನಿಜ. ಆ ಪ್ರಕರಣದಲ್ಲಿ ನಾನು ಬಹಳಷ್ಟು ದಿನ ಜೈಲಿನಲ್ಲಿ ಇದ್ದೆ ಎಂದರೆ ಸರಿಯಲ್ಲ. ಆ ಪ್ರಕರಣದಲ್ಲಿ ನಾನು ಜಾಮೀನು ಪಡೆದಿದ್ದೇನೆ ಎಂದರೆ ನಿಜ. ಈಗ ನಾನು ನೋಡುತ್ತಿರುವ ಪೊಟೋಗಳಲ್ಲಿ ನಾನು ರಾಜಕೀಯ ಧುರೀಣರ ಜೊತೆ ಇದ್ದೇನೆ ಎಂದರೆ ನಿಜ. ಸದರಿ ಪೊಟೋಗಳನ್ನು ನಿ.ಡಿ*-5* ರಿಂದ *8* ಎಂದು ಗುರುತಿಸಿದೆ. ನಾನು ಜನರಿಗೆ ರಾಜಕೀಯ ಧುರೀಣರ ಪರಿಚಯವಿದೆ ಎಂದು ನಂಬಿಸಿ ಮೋಸ ಮಾಡುವ ಪ್ರವೃತ್ತಿಯನ್ನು ಹೊಂದಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ *1* ನೇ ಆರೋಪಿತ ಮತ್ತು ಆತನ ಸ್ನೇಹಿತರನ್ನು ನಂಬಿಸಿದ್ದೆ ಎಂದರೆ ಸರಿಯಲ್ಲ. ನಾನು ಜನತಾದಳದ ರಾಷ್ಟ್ರೀಯಾ ಕಾರ್ಯಕಾರಿ ಸಮಿತಿಯಲ್ಲಿ ಆಯ್ಕೆಯಾಗಿದ್ದೆ ಎಂದರೆ ನಿಜ. ನಾನು ಕರ್ನಾಟಕ ಉಗ್ರಾಮ ನಿಗಮದ ನಿರ್ದೇಶಕನಾಗಿ ನೇಮಕವಾಗಿದ್ದೇನೆ ಎಂದರೆ ನಿಜ. ಈಗ ನಾನು ನೋಡುತ್ತಿರುವ ದಾಖಲೆ ನಾನು ಆ ರೀತಿ ನೇಮಕಗೊಂಡ ಬಗ್ಗೆ

ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದ ದಾಖಲೆಗಳು ಇವೆ ಎಂದರೆ ನಿಜ. ಸಾಕ್ಷಿ ಒಪ್ಪಿದ್ದರಿಂದ ಸದರಿ ದಾಖಲೆಯನ್ನು ನಿ.ಡಿ-9 ಎಂದು ಗುರುತಿಸಿದೆ.

6. 2011ರಲ್ಲಿ ಲಕ್ಷ್ಮಿಪುರಂ ಪೋ.ಠಾಣೆಯ ಇನ್ಸ್ ಪೆಕ್ಟರ್ ಸಿದ್ದರಾಜು ಇವರ ಗೃಹಪ್ರವೇಶ ಮೈಸೂರಿನಲ್ಲಿ ನಡೆದಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಗೃಹಪ್ರವೇಶಕ್ಕೆ ನಾನು 1ನೇ ಆರೋಪಿತನನ್ನು ಕರೆದುಕೊಂಡು ಹೋಗಿ ಸಿದ್ದರಾಜು ಇವರಿಗೆ ಪರಿಚಯಿಸಿದ್ದೆ ಎಂದರೆ ಸರಿಯಲ್ಲ. ನಾನೇ 1ನೇ ಆರೋಪಿತನ ವಿರುದ್ಧ ಮಹದೇವಮೂರ್ತಿಯಿಂದ ದೂರು ಕೊಡಿಸಿ ಪ್ರಕರಣ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಸಿದ್ದರಾಜು ಇವರ ಪರಿಚಯ ಇದುದ್ದರಿಂದ ನನಗೆ ಪರಿಚಯವಿದ್ದ ವ್ಯಕ್ತಿಗಳನ್ನು ಸಾಕ್ಷಿಗಳನ್ನಾಗಿ ಬಳಸಿಕೊಂಡು ಆರೋಪಿತರ ವಿರುದ್ಧ ಆರೋಪಣಾ ಪಟ್ಟಿ ಸಲ್ಲಿಸುವಂತೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಮಹದೇವಮೂರ್ತಿಯವರು ದೂರು ಕೊಡುವ ಕಾಲಕ್ಕೆ ನಾನು ಸಹ ಪೋ.ಠಾಣೆಯಲ್ಲಿದ್ದೆ ಎಂದರೆ ಸರಿಯಲ್ಲ. ದಿಃ07.06.2015 ರಂದು ಮಹದೇವಮೂರ್ತಿ ನನಗೆ ಪೋನ್ ಕರೆ ಮಾಡಿಲ್ಲ. ಸಾಕ್ಷಿ ಪುನಃ ಹೇಳುತ್ತಾರೆ ಪಾರ್ಕ್ ನಲ್ಲಿ ನಡೆದ ಘಟನೆ ಬಳಿಕ ಅವರು ನನಗೆ ಕರೆ ಮಡಿದ್ದರು ಆದರೆ 07.06.2015 ರಂದು ಮಾಡಿದ್ದರೋ ಅಥವಾ 08.06.2015 ರಂದು ಮಾಡಿದ್ದರೋ ನೆನಪಿಲ್ಲ. ಆ ಘಟನೆ ಕುರಿತು ಪ್ರಕರಣದ ದಾಖಲಾದ ಬಳಿಕ ನಾನು ಮಹದೇವಮೂರ್ತಿಯನ್ನು ಭೇಟಿ ಮಾಡಿದ್ದೆ. ಚಾಸಾ-19 ಸಿದ್ದರಾಜು ಇವರು ನನ್ನ ಸ್ನೇಹಿತರಿದ್ದ ಕಾರಣ ಅವರ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಂತೆ ಪ್ರಕರಣ ಸೃಷ್ಟಿ ಮಾಡಿದ್ದೆ ಎಂದರೆ ಸರಿಯಲ್ಲ. ಉದ್ದೇಶಪೂರ್ವಕಾಗಿ 1ನೇ ಆರೋಪಿತನ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
**ಮೈಸೂರು**